**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸೆಷನ್ಸ್ ಕೇಸ್ ನಂಃ 5/2019** ಪಿ.ಡಬ್ಲ್ಯುಃ 1

ಸಿ.ಡಬ್ಲ್ಯುಃ 2

| | |
|---|---|
| ಸಾಕ್ಷಿದಾರರ ಹೆಸರು | ಸುರೇಶ್ |
| ತಂದೆಯ ಹೆಸರು | ಜನಾರ್ಧನ |
| ವಯಸ್ಸು | 63 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಪಡುಬಿದ್ರೆ |

ದಿನಾಂಕಃ 05-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಪಡುಬಿದ್ರೆಯ ಕೆಳಗಿನ ಪೇಟೆಯಲ್ಲಿ 2018 ರ ಸಾಲಿನಲ್ಲಿ ಪೇಪರ್ ಹಾಕುವ ಕೆಲಸ ಮಾಡುತ್ತಿದ್ದೆ. ನನಗೆ ಚಾಸಾ-1 ಪರಿಚಯ. ನನಗೆ ಚಾಸಾ-3, 4 ಇವರ ಪರಿಚಯ ಇದೆ. ದಿನಾಂಕ 02-09-2018 ರಂದು ನಾನು ಎಂದಿನಂತೆ ಕರ್ನಾಟಕ ಬ್ಯಾಂಕ್ ಪಡುಬಿದ್ರೆ ಶಾಖೆಯ ಹಿಂಬದಿಯಲ್ಲಿ ನನ್ನ ವಾಹನವನ್ನು ನಿಲ್ಲಿಸಲು ಹೋಗಿದ್ದೆ. ಆಗ ಬೆಳಗ್ಗಿನ ಜಾವಾದ 4.00 ಗಂಟೆಯ ಸಮಯ. ಆಗ ಹತ್ತಿರದಲ್ಲಿ ವ್ಯಕ್ತಿಯೊಬ್ಬ ನರಳಾಡುವ ಶಬ್ದ ಕೇಳಿತ್ತು. ಅದಕ್ಕಾಗಿ ನಾನು ಟಾರ್ಚ ಲೈಟ್ ಹಾಕಿ ನೋಡಿದಾಗ ಆ ವ್ಯಕ್ತಿ ಚಾಸಾ-1 ಆಗಿದ್ದ. ಆತನ ಬಾಯಿಗೆ ಬಟ್ಟೆಯಿಂದ ಕಟ್ಟಿದ್ದರು, ಕೈಗಳನ್ನು ಹಿಂದೆ ಕಟ್ಟಿದ್ದರು. ಕಾಲುಗಳನ್ನು ಸಹ ಕಟ್ಟಿದ್ದರು. ನಾನು ಅವರಿಗೆ ಕಟ್ಟಿದ್ದ ಬಟ್ಟೆಗಳನ್ನು ಬಿಚ್ಚಿದ್ದೆ. ಅವರನ್ನು ನಾನು ವಿಚಾರಿಸಿದಾಗ, ರಾತ್ರಿ ತಾನು ಎಟಿಯಂನಲ್ಲಿ ಇದ್ದ ಸಮಯದಲ್ಲಿ 4-5 ಜನ ವ್ಯಕ್ತಿಗಳು ಎಟಿಎಂಗೆ ಬಂದು, ಅವರಿಗೆ ಚಾಕು ತೋರಿಸಿ, ಬೆದರಿಸಿ, ಬಾಯಿಗೆ ಬಟ್ಟೆ ಕಟ್ಟಿ ಎಟಿಎಂನಿಂದ ಹೊರಗೆ ಎಳೆದುಕೊಂಡು ಬಂದು, ಕೈಕಾಲುಗಳನ್ನು ಬಟ್ಟೆಗಳಿಂದ

ಕಟ್ಟಿ ಅವರನ್ನು ಪೊದೆಗೆ ಎಸೆದು, ಆತನಲ್ಲಿ ಇದ್ದ ಒಂದು ಸ್ಯಾಮಸಂಗ್ ಮೊಬೈಲ್, ನಗದು ಹಣ ರೂಃ 400 ನ್ನು ಸುಲಿಗೆ ಮಾಡಿಕೊಂಡು ಹೋಗಿರುವುದಾಗಿ ತಿಳಿಸಿದ್ದರು.

2) ನಂತರ ನಾನು ಹಾಗೂ ಚಾಸಾ-1 ರವರು, ಎಟಿಎಂ ಬಳಿ ಬಂದಾಗ, ಎಟಿಎಂಗೆ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮಾರದ ಕೇಬಲ್ ಗಳನ್ನು ತುಂಡು ಮಾಡಿರುವುದು ಕಂಡುಬಂದಿತ್ತು. ಎಟಿಎಂ ಪಕ್ಕದಲ್ಲಿದ್ದ ಧನಲಕ್ಷ್ಮೀ ಜ್ಯುವೆಲ್ಲರಿ ಅಂಗಡಿಯ ಬೀಗ ಮುರಿದಿರುವುದು ಕಂಡುಬಂದಿತ್ತು. ಹಾಗೂ ಎಟಿಎಂ ಪಕ್ಕದಲ್ಲಿರುವ ಒಂದು ಮೊಬೈಲ್ ಅಂಗಡಿಯ ಬೀಗ ಮುರಿದಿರುವುದು ಕಂಡು ಬಂದಿತ್ತು. ಅದಕ್ಕಾಗಿ ನಾನು ಚಾಸಾ-3 ಮತ್ತು 4 ಇವರಿಗೆ ಮಾಹಿತಿ ಕೊಟ್ಟಿದ್ದೆ. ಕೂಡಲೇ ಚಾಸಾ-3 ಮತ್ತು 4 ಇವರು ಸ್ಥಳಕ್ಕೆ ಬಂದಿದ್ದರು. ಚಾಸಾ-3 ಇವರು ತಮ್ಮ ಅಂಗಡಿಯ ಒಳಗೆ ಹೋಗಿ ಪರಿಶೀಲಿಸಿದಾಗ ಅವರ ಅಂಗಡಿಯಲ್ಲಿ ಅಂದಾಜು 250 ಗ್ರಾಂ ಬೆಳ್ಳಿಯ ಆಭರಣ ಹಾಗೂ 8 ಗ್ರಾಂ ಚಿನ್ನದ ಆಭರಣಗಳು ಸುಲಿಗೆ ಆಗಿರುವುದು ಕಂಡುಬಂದಿತು. ಚಾಸಾ-4 ಇವರ ಮೊಬೈಲ್ ಅಂಗಡಿಯನ್ನು ಅವರು ಪರಿಶೀಲಿಸಿದಾಗ, ಅವರ ಅಂಗಡಿಯಲ್ಲಿ ಇದ್ದ ಸುಮಾರು 35 ಮೊಬೈಲ್ ಗಳು ಸುಲಿಗೆ ಆಗಿರುವುದು ಕಂಡುಬಂದಿತು. ನಂತರ ಈ ಬಗ್ಗೆ ಚಾಸಾ-1 ಪೊಲೀಸರಿಗೆ ದೂರು ಕೊಟ್ಟಿರುತ್ತಾರೆ. ಚಾಸಾ-1 ಈಗ ಮೃತಪಟ್ಟಿರುತ್ತಾರೆ. ಆ ದೂರಿಗಾಗಿ ನನ್ನನ್ನು ವಿಚಾರಣೆ ಮಾಡಿದ್ದರು. ಚಾಸಾ-1 ಇವರು ಕೊಟ್ಟ ದೂರನ್ನು ಈಗ ನೋಡಿ, ಅದನ್ನು **ನಿಶಾನೆ ಪಿ-1** ಎಂದು, ಅದರಲ್ಲಿರುವ ಚಾಸಾ-1 ಇವರ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಿದೆ.

3) ಅದೇ ದಿನ ಪೊಲೀಸರು ಸ್ಥಳ ತನಿಖೆಗಾಗಿ ಎಟಿಎಂ ಬಳಿ ಬಂದಿದ್ದರು. ಚಾಸಾ-1, 3, ಹಾಗೂ 4 ರವರು ಎಟಿಎಂ ಮತ್ತು ಧನಲಕ್ಷ್ಮಿ ಜ್ಯುವೆಲ್ಲರಿ ಅಂಗಡಿ ಮತ್ತು ಮೊಬೈಲ್ ಅಂಗಡಿಯನ್ನು ತೋರಿಸಿದ ಮೇರೆಗೆ, ಪೊಲೀಸರು ಆ ಎಲ್ಲಾ ಸ್ಥಳಗಳನ್ನು ಪರಿಶೀಲಿಸಿ, ಪಂಚನಾಮೆ ತಯಾರಿಸಿ, ನನ್ನ, ಚಾಸಾ-1, 3, ಇವರ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-2** ಎಂದು, ಅದರಲ್ಲಿರುವ ನನ್ನ ಸಹಿಯನ್ನು **ನಿಶಾನೆ ಪಿ-2(ಎ)** ಎಂದು ಗುರುತಿಸಿದ್ದೇನೆ.

4) ಪಂಚನಾಮೆ ಕಾಲದಲ್ಲಿ ಚಾಸಾ-1 ಇವರಿಗೆ ಕೈಕಾಲುಗಳನ್ನು ಕಟ್ಟಲು ಬಳಸಿದ್ದ 5 ಬಟ್ಟೆ ತುಂಡುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಈಗ ಅವುಗಳನ್ನು ನೋಡಿ ಗುರುತಿಸಬಲ್ಲೆ. ಈಗ ನೋಡಿದ ಸೀಲು ಮಾಡಿದ ಬಟ್ಟೆಗಳ ಪ್ಯಾಕ್ ಗಳಲ್ಲಿ ಇರುವ ಒಂದು ಪ್ಯಾಕ್ ನ್ನು ತೆಗೆದು ನೋಡಿದಾಗ, ಇದ್ದ 2 ಬಟ್ಟೆ ತುಂಡುಗಳನ್ನು ಒಟ್ಟಾಗಿ **ಎಂಒ-1 ಎಂದು,** ಉಳಿದ 3 ಬಟ್ಟೆ ತುಂಡುಗಳನ್ನು ಪ್ರತ್ಯೇಕವಾದ ಕವರ್ ಗಳಲ್ಲಿ ಇದ್ದುದರಿಂದ, ಅವುಗಳನ್ನು ಕ್ರಮವಾಗಿ **ಎಂಒ-2, 3, 4** ಎಂದು ಗುರುತಿಸಿದೆ. ಅದೇ ಸಮಯ ಚಾಸಾ-1 ರವರು ಕೃತ್ಯ ಸಮಯ ಧರಿಸಿದ್ದ ಒಂದು ಅಂಗಿಯನ್ನು ಹಾಜರುಪಡಿಸಿದ್ದರು. ಸದರಿ ಅಂಗಿಯನ್ನು **ಎಂಒ-5** ಎಂದು ಗುರುತಿಸಿದೆ.

5) ಪಂಚನಾಮೆ ಕಾಲದಲ್ಲಿ ಚಾಸಾ-3 ರವರ ಅಂಗಡಿಯ ಬಳಿ ಬಿದ್ದಿದ್ದ ಹಳೆಯ ಜಖಂ ಗೊಂಡ ಬೀಗ, ಜಖಂಗೊಂಡಿರುವ ಕಬ್ಬಿಣದ ಬೀಗ ಹಾಗೂ ಅದರ ಕೊಂಡಿ, ಹಾಗೂ ಇನ್ನೊಂದು ಜಖಂಗೊಂಡ ಹಳೆಯ ಕಬ್ಬಿಣದ ಬೀಗ, ಒಂದು ಸಿಸಿ ಕ್ಯಾಮಾರದ ಭಾಗ, ಹಾಗೂ ಒಂದು ಕಬ್ಬಿಣದ ತುಂಡರಿಸುವ ಕಟ್ಟರ್ ನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಸದರಿ ಸ್ವತ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ 5 ಸೀಲು ಮಾಡಿದ ಬಟ್ಟೆಗಳ ಪ್ಯಾಕ್ ನಿಂದ ತೆಗೆದ ಜಖಂಗೊಂಡ ಬೀಗ ವನ್ನು **ಎಂಒ-6** ಎಂದು, ಜಖಂಗೊಂಡಿರುವ ಕಬ್ಬಿಣದ ಬೀಗ ಹಾಗೂ ಅದರ ಕೊಂಡಿ **ಎಂಒ-7**, ಜಖಂಗೊಂಡ ಹಳೆಯ ಕಬ್ಬಿಣದ ಬೀಗ **ಎಂಒ-8**, ಸಿಸಿ ಕ್ಯಾಮಾರದ ಭಾಗ **ಎಂಒ-9**, ಮತ್ತು ಕಬ್ಬಿಣದ ಕಟ್ಟರ್ ನ್ನು **ಎಂಒ-10** ಎಂದು ಗುರುತಿಸಿದೆ.

6) ಸದರಿ ಪಂಚನಾಮೆ ಕಾಲದಲ್ಲಿ ಚಾಸಾ-4 ರವರು ಅಂಗಡಿಯಲ್ಲಿ ಇದ್ದ 5 ಇನ್ವಾಯಿಸ್ ಗಳನ್ನು ಹಾಜರುಪಡಿಸಿದ್ದರು. ಅವುಗಳನ್ನು ಪೊಲೀಸರು ಜಪ್ತು ಮಾಡಿದ್ದರು. ಸದರಿ 5 ಇನ್ವಾಯಿಸ್ ಗಳನ್ನು ಈಗ ನೋಡಿ ಅದನ್ನು **ನಿಶಾನೆ ಪಿ-3 ರಿಂದ 7** ಎಂದು ಗುರುತಿಸಿದ್ದೇನೆ. ನಿಶಾನೆ ಪಿ-2 ರ ಸಮಯದಲ್ಲಿ ತೆಗೆದ 7 ಪೋಟೋಗಳನ್ನು ಈಗ ನೋಡಿ, ಅದನ್ನು ಒಟ್ಟಾಗಿ **ನಿಶಾನೆ ಪಿ-8** ಎಂದು ಗುರುತಿಸಿದೆ.

7) ಘಟನೆಯಾದ ಒಂದು ತಿಂಗಳ ನಂತರ ನನ್ನನ್ನು ಪೊಲೀಸರು ಠಾಣೆಗೆ ಕರೆಯಿಸಿದ್ದರು. ಠಾಣೆಯಲ್ಲಿ ಪೊಲೀಸರು 1 ರಿಂದ 5 ನೇ ಆರೋಪಿತರನ್ನು ತೋರಿಸಿ, ಅವರೇ ದರೋಡೆ ಮಾಡಿದ ವ್ಯಕ್ತಿಗಳು ಎಂದು ತಿಳಿಸಿದ್ದರು. ಹಾಗೂ ಆರೋಪಿತರಿಂದ

ವಶಪಡಿಸಿಕೊಂಡ ಒಂದು ಚಾಕು ಮತ್ತು 5 ಮೊಬೈಲ್ ಗಳನ್ನು ತೋರಿಸಿದ್ದರು. ಸದರಿ ಚಾಕುವನ್ನು ನೋಡಿದರೆ ಗುರುತಿಸಬಲ್ಲೆ. ಸೀಲು ಮಾಡಿದ ಪ್ಯಾಕ್ ನಿಂದ ತೆಗೆದ ಚಾಕುವನ್ನು ಸಾಕ್ಷಿಗೆ ತೋರಿಸಿದಾಗ, ಅದನ್ನು ನೋಡಿ ಗುರುತಿಸಿದ್ದು, ಅದನ್ನು **ಎಂಒ-11** ಎಂದು ಗುರುತಿಸಿದೆ. ಆದಿನ ಠಾಣೆಯಲ್ಲಿ ನೋಡಿದ 1 ರಿಂದ 5 ನೇ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

ಪಾಟಿಸವಾಲುಃ ಆರೋಪಿತರು ತಲೆತಪ್ಪಿಸಿಕೊಂಡಿದ್ದರಿಂದ ಇಲ್ಲ ಎಂದು ತೆಗೆದುಕೊಂಡಿತು.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.